# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 403 |
| ಸದಸ್ಯರ ಹೆಸರು | : | ಶ್ರೀ.ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14.09.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಕಲಿ ಉದ್ಯೋಗದ ಕುರಿತು ಪತ್ರಿಕೆಗಳಲ್ಲಿ ಜಾಹಿರಾತು ನೀಡಿದ್ದವರ ವಿರುದ್ಧ ಸಂಜಯ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ನಕಲಿ ಉದ್ಯೋಗದ ಕುರಿತು ಪತ್ರಿಕೆಗಳಲ್ಲಿ ಜಾಹಿರಾತು ನೀಡಿರುವುದು ಗಮನಕ್ಕೆ ಬಂದಿರುವುದಿಲ್ಲ. ಆದರೆ ನಕಲಿ ನೇಮಕಾತಿ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಅಂತಹವರನ್ನು ಬಂಧಿಸಲಾಗಿದೆಯೇ; ಇಂತಹ ಕಾರ್ಯದಿಂದ ಎಷ್ಟು ನಿರುದ್ಯೋಗಿ ಯುವಕರು ಉದ್ಯೋಗದಿಂದ ವಂಚಿತ ರಾಗಿದ್ದಾರೆ. | ಹೌದು, ಬಂಧಿಸಲಾಗಿದೆ. ನಕಲಿ ನೇಮಕಾತಿ ಆದೇಶದಲ್ಲಿ ಕಾಣಿಸಿರುವ ಯಾವುದೇ ಅಭ್ಯರ್ಥಿಯು ವಂಚಿತರಾಗಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಇ) | ಈ ರೀತಿ ನಕಲಿ ಜಾಹಿರಾತು ನೀಡಿದ್ದು ಇಲಾಖಾಧಿಕಾರಿಗಳ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಸಹಕರಿಸಿದ್ದವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು: | ನಕಲಿ ನೇಮಕಾತಿ ಆದೇಶ ನೀಡಿದ ಬಗ್ಗೆ ಇಲಾಖೆಯ ಗಮನಕ್ಕೆ ಬಂದ ಕೂಡಲೇ ದಿ:28-07.2022 ರಂದು ಸಂಜಯ ನಗರ ಪೋಲೀಸ್ ಠಾಣೆ, ಬೆಂಗಳೂರು ಇಲ್ಲಿ ಅಪರಾಧ ಸಂಖ್ಯೆ:0199/2022 ರನ್ವಯ ದೂರು ದಾಖಲಿಸಿದೆ. ಈ ಕೃತ್ಯಕ್ಕೆ ಸಹಕಾರ ನೀಡಿದವರ ಬಗ್ಗೆ ಪೋಲೀಸ್ ಇಲಾಖೆಯಿಂದ ಸಮಗ್ರ ತನಿಖೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಈ) | ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಎಷ್ಟು ಜನರನ್ನು ತನಿಖೆಗೆ ಗುರಿ ಮಾಡಲಾಗಿದೆ: ಎಷ್ಟು ಜನರನ್ನು ಆರೋಪಿತರನ್ನಾಗಿ ಮಾಡಲಾಗಿದೆ ಮತ್ತು ತನಿಖೆ ಯಾವ ಹಂತದಲ್ಲಿದೆ? | ಈ ಪ್ರಕರಣದ ಬಗ್ಗೆ ಒಬ್ಬರನ್ನು ಪೋಲೀಸ್ ಅಧಿಕಾರಿಗಳು ದಸ್ತಗಿರಿ ಮಾಡಲಾಗಿದ್ದು, ಸಮಗ್ರ ತನಿಖೆ ಪ್ರಗತಿಯಲ್ಲಿರುತ್ತದೆ. |

**ಸಂ: ಪಸಂಮೀ ಇ-135 ಪಸಸೇ 2022**

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು